Office of the Principal Director,
Karnataka State Audit and Accounts Department,
TTMC Building, `A' Block,
3rd floor, B.M.T.C.,
Shanthinagar, Bengaluru-560 027.
Phone No:- 080- 22214817
Fax No.:- 080- 22216500
E-mail: controllerstateaccounts@yahoo.com

ಪ್ರಧಾನ ನಿರ್ದೇಶಕರ ಕಚೇರಿ,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,
ಟಿಟಿಎಂಸಿ ಕಟ್ಟಡ, 'ಎ'ಬ್ಲಾಕ್,
3ನೇ ಮಹಡಿ, ಬಿ.ಎಂ.ಟಿ.ಸಿ.,
ಶಾಂತಿನಗರ, ಬೆಂಗಳೂರು-560 027.
ದೂರವಾಣಿ ಸಂಖ್ಯೆ:- 080- 22214817
ಫ್ಯಾಕ್ಸ್ ಸಂಖ್ಯೆ:- 080- 22216500
ಇ-ಮೇಲ್: controllerstateaccounts@yahoo.com

ಸಂಖ್ಯೆ: ಸಿಎಸ್ಎ 01 ಸುತ್ತೋಲೆ 2022 /1045. ದಿನಾಂಕ:08-07-2022

# ಸುತ್ತೋಲೆ

ವಿಷಯ: ಕ.ನಾ.ಸೇ.ನಿ ನಿಯಮ 53(ಎಫ್) ರನ್ವಯ ಪ್ರಮಾಣ ಪತ್ರಗಳ ಮನವಿಯನ್ನು ಕಛೇರಿಯ ಮುಖ್ಯಸ್ಥರ ಮೂಲಕ ಸಮುಚಿತ ಮಾರ್ಗದಲ್ಲಿ ಸಲ್ಲಿಸುವ ಬಗ್ಗೆ.

******

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮಗಳನ್ವಯ ಅನ್ಯಸೇವೆಯ ಮೇಲೆ ನಿಯೋಜನೆಯಲ್ಲಿರುವ ಗೆಜೆಟೆಡ್ ಅಧಿಕಾರಿಗಳ ಪ್ರಕರಣಗಳಲ್ಲಿ ಸಕ್ಷಮ ಪ್ರಾಧಿಕಾರವು ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡಲು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 53(ಎಫ್) ರನ್ವಯ ಪತ್ರದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಇಲಾಖಾ ಮುಖ್ಯಸ್ಥರು ಕೈಗೊಳ್ಳಬೇಕಾಗಿರುತ್ತದೆ.

ಆದುದರಿಂದ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ಅನ್ಯ ಸೇವೆ ನಿಯೋಜನೆ ಮೇರೆಗೆ ವಿವಿಧ ನಿಗಮ/ಸಂಸ್ಥೆ/ಮಂಡಳಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ವಾರ್ಷಿಕ ವೇತನ ಬಡ್ತಿಗಾಗಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 53 (ಎಫ್) ರನ್ವಯ ವಾರ್ಷಿಕ ಕಾರ್ಯನಿರ್ವಹಣಾ ಪ್ರಮಾಣ ಪತ್ರವನ್ನು ಕೋರಿ ಮನವಿಯನ್ನು ಅವರು ಕಾರ್ಯ ನಿರ್ವಹಿಸುತ್ತಿರುವ ಕಛೇರಿಯ ಮುಖ್ಯಸ್ಥರ ಮೂಲಕ ಸಮುಚಿತ ಮಾರ್ಗದಲ್ಲಿ ರಜಾ ವಿವರಗಳೊಂದಿಗೆ ಸಲ್ಲಿಸುವಂತೆ ಸೂಚಿಸಿದೆ.

ಪ್ರಧಾನ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ,
ಬೆಂಗಳೂರು.

ಪ್ರತಿಯನ್ನು:

1. ಎಲ್ಲಾ ಗ್ರೂಪ್ 'ಎ' ಅಧಿಕಾರಿಗಳಿಗೆ
2. ಲೆಕ್ಕಪರಿಶೋಧನಾಧಿಕಾರಿ, ತರಬೇತಿ ಶಾಖೆ ಇವರಿಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು.
3. ಕಛೇರಿ ಪ್ರತಿ.